
# ಅಂಕುರ...

ಹಳೇ ಬೇರು ಹೊಸ ಚಿಗುರು

ಮೇ 2022 ಬೆಲೆ–₹10

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪ್ರಕಟಣೆ | ಖಾಸಗಿ ಪ್ರಸರಣಕ್ಕಾಗಿ ಮಾತ್ರ



ಅಶ್ವಿನಿ . ಎಸ್ . ಪಿ

# ಸಂಪಾದಕರ ನುಡಿ

ಸಾಹಿತ್ಯ, ನಿಂತ ನೀರಲ್ಲ ಅದು ಸಾಗರದಂತೆ ಎಂಬ ವಿಷಯ ಎಷ್ಟು ಸತ್ಯವೋ, ಅದು ಜೀವನದ ಕನ್ನಡಿ ಎಂಬುದು ಅಷ್ಟೇ ಸರ್ವಕಾಲಿಕ ಸತ್ಯ. ಸಾಹಿತ್ಯ ಸೃಜನಶೀಲ ಕಾಲಪ್ರಕಾರವಾಗಿದ್ದು ಮಾನವನ ಮಾನಸಿಕ ವಿಕಸನಕ್ಕೆ ಬೇಕಾದ ವೈಚಾರಿಕ ನೆಲೆಗಟ್ಟು ಮತ್ತು ವಿಚಾರಗಳನ್ನು ಒದಗಿಸುವಲ್ಲಿ ತುಂಬಾ ಮುಖ್ಯವಾಗಿದ್ದು. ಮನರಂಜನೆಯ ಜೊತೆಗೆ ಸಮಾಜವನ್ನು ಸತ್ಯದ ದಿಕ್ಕಿನತ್ತ ನಡೆಸುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ . ಸಾಹಿತ್ಯವು ಕನ್ನಡ ಭಾಷೆಯಲ್ಲಿ ಬೆರೆತದ್ದು ಸಾವಿರದ ಐದು ನೂರು ವರ್ಷಗಳ ಹಿಂದೆಯೇ, ಸಾಮಾನ್ಯನದೆಯಲಿ ಉದಯಿಸಿ, ರಾಜಾಶ್ರಯ ಪಡೆದು ಕನ್ನಡ ಸಾಹಿತ್ಯ ಯಾವ ಸಾಹಿತ್ಯಕ್ಕೂ ಕಡಿಮೆ ಇಲ್ಲದೆ ತನ್ನ ಬೇರುಗಳನ್ನು, ಅಭಿಮಾನಿಗಳನ್ನು ಪ್ರಪಂಚದಾದ್ಯಂತ ಒಳಗೊಂಡಿದೆ.

ಕನ್ನಡ ಸಾಹಿತ್ಯವು ೧೯೮೦ ರಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಲ್ಲಿನ, ವಿದ್ಯಾರ್ಥಿಗಳಲ್ಲಿನ ಕನ್ನಡಾಭಿಮಾನ ಮತ್ತು ಸಾಹಿತ್ಯಾಸಕ್ತಿಯ ಕುರುಹಾಗಿ "ಅಂಕುರ" ಪತ್ರಿಕೆಯಾಗಿ ಕೃಷಿ ಕ್ಷೇತ್ರಕ್ಕೂ ಕಾಲಿರಿಸಿತು. ಕೃಷಿ ವಿದ್ಯಾರ್ಥಿಗಳ ಸಾಹಿತ್ಯ ಕೃಷಿಗೆ ವೇದಿಕೆಯಾಗಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಲ್ಲಿನ ತೊಂದರೆಗಳನ್ನು ಆಡಳಿತವರ್ಗಕ್ಕೆ ತಲುಪಿಸುವ ಅಸ್ತ್ರವಾಗಿ, ವಿದ್ಯಾರ್ಥಿಗಳ ಧ್ವನಿಯಾಗಿ ಸುಮಾರು ವರ್ಷಗಳ ಕಾಲ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ನಡೆಸಿ, ವಿದ್ಯಾರ್ಥಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ಆಕರ್ಷಿಸುವುದರಲ್ಲಿ ಅವರ ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು ಜಗತ್ತಿಗೆ ಪರಿಚಯಿಸುವ ಮಹತ್ತರ ಕಾರ್ಯ ನಡೆಸಿತ್ತು ಆದರೆ, ಹಲವು ಪ್ರಕಟಣೆ ಪ್ರಕಟಣೆಗಳ ನಂತರ ಸ್ಥಗಿತಗೊಂಡಿತು.

ನಂತರ ೨೦೧೫ರಲ್ಲಿ, ಕನ್ನಡ ವಿದ್ಯಾರ್ಥಿಗಳ ಪರಿಶ್ರಮದಿಂದ ಮತ್ತೆ ಅಂಕುರವು ಪುನರ್ಜನ್ಮ ಪಡೆದು ಹೊಸ ಆಯಾಮದೊಂದಿಗೆ ಲೋಕಾರ್ಪಣೆಗೊಂಡಿತು. ಕೃಷಿ ವಿದ್ಯಾರ್ಥಿಗಳ ಲೇಖನಗಳು, ಕವನ –ಕವಿತೆಗಳು, ಪ್ರಬಂಧಗಳು ಚಿತ್ರಕಲೆಗಳು ಹಾಗೂ ಹಲವಾರು ಅಂಶಗಳನ್ನೊಳಗೊಂಡ ಸುಧೀರ್ಘ ೨೦ ಪುಟಗಳ ಪತ್ರಿಕೆಯಾಗಿ ಪ್ರಕಟಣೆಗೊಂಡಿತು. ನಾಲ್ಕು ವರ್ಷಗಳ ಕಾಲ ಮಾಸಿಕ, ದ್ವೈಮಾಸಿಕ ಹಾಗೂ ತ್ರೈಮಾಸಿಕ ಕನ್ನಡ ವಿದ್ಯಾರ್ಥಿ ಪತ್ರಿಕೆಯಾಗಿ ಪ್ರಕಟಣೆಗೊಂದಿತು. ಸಾಮಾನ್ಯರಲ್ಲಿ ಸಾಹಿತ್ಯದ ಬೀಜ ಬಿತ್ತಿ, ಕೃಷಿ ನಡೆಸಿ ಕೊರೋನ ಮಹಾಮಾರಿಯ ಪೀಡೆಗೆ ಒಳಗಾಗಿ ಮತ್ತೆ ಪ್ರಕಟಣೆ ಸ್ತಬ್ಧಗೊಂಡಿತು.

ಕಡಲ ತೀರದ ಮರಳಲ್ಲಿ ಕರಗೋ ಕಡಲಲೆಯು, ಮತ್ತೆ ಕಡಲ ಮಧ್ಯದಲ್ಲಿ ಬಾನೆತ್ತರಕ್ಕೆ ಜಿಗಿದೇಳುವಂತೆ ಮತ್ತೆ ಅಂಕುರವು ಚಿಗುರೊಡೆದು ಹಳೇ ಬೇರಿನೊಂದಿಗೆ ನಿಮ್ಮ ಮುಂದೆ ಬಂದಿದೆ . ಅಂಕುರ ಬಳಗದ ವಿದ್ಯಾರ್ಥಿಗಳ ಪರಿಶ್ರಮದಿಂದ, ಕನ್ನಡಾಭಿಮಾನಿಗಳ ಪ್ರೋತ್ಸಾಹದಿಂದ, ಕನ್ನಡ ಸಾಹಿತ್ಯಾಸಕ್ತರ ಕ್ರಿಯಾಶೀಲತೆಯಿಂದ ಮತ್ತೆ ಕೃಷಿಕ್ಷೇತ್ರದಲ್ಲಿ ಸಾಹಿತ್ಯದ ಮುಖಪುಟವಾಗಿ ಹೊರಬಂದಿದೆ. ಅಂಕುರ ಪತ್ರಿಕೆಯು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸುವ ವಿದ್ಯಾರ್ಥಿಗಳಿಗೆ ಸಾಹಿತ್ಯವನ್ನು ಪರಿಚಯಿಸುವ, ಕನ್ನಡಾಭಿಮಾನವನ್ನು ತುಂಬುವ, ದೇಶಪ್ರೇಮವನ್ನು ಹುರಿದುಂಬಿಸುವ ಕೆಲಸವನ್ನು ನಡೆಸುತ್ತಾ, ಬರಹಗಾರರ, ಲೇಖಕರ, ಕಲೆಗಾರರ, ಸಾಧಕರ ಹಾಗೂ ಕನ್ನಡ ಅಭಿಮಾನಿಗಳ ಆರಾಧನೆಯಲ್ಲಿ, ಆಶ್ರಯದಲ್ಲಿ ಬೆಳೆದು ನಿಲ್ಲಲು, ಕನ್ನಡದ ಮನೆ–ಮನಗಳನ್ನು ತುಂಬಲು ಅಂಕುರ ಪತ್ರಿಕೆಯು ಸದಾ ಕಾರ್ಯನಿರ್ವಹಿಸುತ್ತದೆ. ನಿಮ್ಮೆಲ್ಲರ ಪ್ರೋತ್ಸಾಹ ,ಅನಿಸಿಕೆ, ಅಭಿಪ್ರಾಯಗಳಿಗೆ ಅಂಕುರ ಪತ್ರಿಕೆಯು ಸದಾ ತೆರೆದ ಪುಸ್ತಕದಂತಿರುತ್ತದೆ ಎಂಬ ಆಶಯದೊಂದಿಗೆ....

~ ಅಂಕುರ ಬಳಗ

## " ಅನ್ನದಾತ "

ಜಗತ್ತಿನ ಜನರಲ್ಲಿ ಇವ ಶ್ರೇಷ್ಠದಾತ,
ಹಸಿವನ್ನು ನೀಗಿಸುವ ಅನ್ನದಾತ,
ನಿನ್ನಿಂದಲೇ ಈ ಜಗವು ಎನ್ನುವುದು ಖಚಿತ,
ಬೆವರನ್ನು ಸುರಿಸುವೆ ಹಗಲಿರುಳು ಎಲ್ಲರಿಗಾಗಿ ವಿಪರೀತ.

ನೇಗಿಲ ಹಿಡಿದು ಉಳುವನು ಇಳೆ,
ಬೀಜವನ್ನು ಬಿತ್ತಿ ಕಾಯುವನು ಪ್ರತೀ ನಾಳೆ,
ಬೆಳೆಗೆ ಸಿಗದೆ ಸರಿಯಾದ ಬೆಲೆ,
ಕೊಲ್ಲುತ್ತಿದ್ದಾನೆ ಅವನನ್ನೇ ಅವನು ಪ್ರತೀ ವೇಳೆ.

ಮಧ್ಯವರ್ತಿಗಳೇ ತಿನ್ನುತ್ತಿದ್ದರೆ ರೈತರನ್ನ,
ಸಾಲವು ಸಾಲಾಗಿ ಸುಡುತ್ತಿದೆ ಅವನನ್ನ,
ಸರಕಾರವು ನೀಡದಾಗಿದೆ ಸರಿಯಾದ ಬೆಂಬಲವನ್ನ,
ಕರುಣಾಮಯಿಗೆ ಕರುಣೆ ತೋರದೆ ಕಣ್ಣೀರಾಗಿದೆ ಜೀವನ.

ಇಡೀ ಲೋಕಕೆ ಅವನೇ ಯಜಮಾನ,
ಅವನೇ ಇಲ್ಲದಮೇಲೆ ಎಷ್ಟಿದ್ದರೇನು ವರಮಾನ,
ನಾನು ಆಗಿರುವೆ ಇದರ ಭಾಗವಾಗಿ ಸಣ್ಣ,
ಕೈ ಬಿಡದಿರು ಎಂದೆಂದಿಗೂ ಈ ಜಗತ್ತನ್ನ.

~ ಗೀತ,
ತೃತೀಯ ವರ್ಷ,
ಬಿ.ಎಸ್ಸಿ. ಕೃಷಿ.

## "ಸ್ನೇಹ"

ಸಮುದ್ರದಲ್ಲಿ ಜೊತೆಯಾದ ಮುತ್ತು ನೀನು..
ಏನೆಂದು ವರ್ಣಿಸಲಿ ನಾ ನಿನ್ನ.
ಮರುಭೂಮಿಯಲ್ಲಿ ನೆರಳಾಗಿರುವೆ ನೀನು..
ಏನೆಂದು ಬಣ್ಣಿಸಲಿ ನಾ ನಿನ್ನ.
ಬರುವ ಹೋಗುವವರ ನಡುವೆ ಮಾಸದ ಬಂಧುವಾಗಿರುವೆ ನೀನು..
ಏನೆಂದು ಬಜಿಸಲಿ ನಾ ನಿನ್ನ.
ಅಂತರಂಗದ ಅಂತಃಕರಣದಲ್ಲಿ ಬೇರುರಿರುವೆ ನೀನು..
ಏನೆಂದು ಹೊಗಳಲಿ ನಾ ನಿನ್ನ.

~ ಚೇತನ,
ತೃತೀಯ ವರ್ಷ,
ಕೃಷಿ ಮಾರುಕಟ್ಟೆ ಮತ್ತು ಸಹಕಾರ.

## "ಮಾಧವ"

ಶಾಂತ ನಗುಮುಖದ ಜಗನ್ಮೋಹನ
ಅರಳುವ ಕುಸುಮಕ್ಕಿಂತಲೂ ಚಂದ ಆ ನಿನ್ನ ಆನನ
ಕೊಳಲನ್ನು ಹಿಡಿದ ಮುರಾರಿ
ಬೆಣ್ಣೆ ಕದ್ದು ನಿನಾಗುವೆ ಪರಾರಿ
ಪೂತನಿಯ ಜೀವಹೀರಿದ ಮುರಳೀಧರ
ನಿನ್ನ ಕೊಳಲಿನ ನಾದವೇ ಸುಮಧುರ
ಸುದರ್ಶನ ಚಕ್ರಧಾರಿ ನಿಲಾಮಯ ಶಾಮ
ನಿನ್ನ ಕಂಗಳ ತುಂಬಾ ಅಮೂರ್ತ ಪ್ರೇಮ
ರುಕ್ಮಿಣಿಯ ಮನದಿ ನೆಲೆಸಿದ ದೇವಕಿನಂದನ
ಗೋಪಿಕೆಯರ ಮನ ಬಿಡಲೊಲ್ಲದ ಯದುನಂದನ
ನಿನ್ನ ಶಿರದ ಮೇಲೆ ಅರಳಿದೆ ನವಿಲುಗರಿ
ನಿನ್ನಿಂದ ಜಗಕ್ಕೆ ಅರಿವಾಯಿತು ಧರ್ಮದ ದಾರಿ
ರಾಧೆಯ ಹೃದಯ ಸಿಂಹಾಸನದಿ ರಾರಾಜಿಸಿದ ಮಾಧವ
ನಿನ್ನ ಭಕ್ತರಿಗೆ ಎಂದೆಂದಿಗೂ ನೀನೇ ಸುದೈವ
ಧರ್ಮ ಪ್ರತಿಷ್ಠಾಪನೆಗೆ ನೀ ತೊಟ್ಟೆ ಪಣವ
ಭಕ್ತರ ಹೃದಯಾಂತರಾಳದಲ್ಲಿ ನಗುತ್ತಿರುವ ಹೇ...
ಮುದ್ದುಕೃಷ್ಣ..

~ ಶ್ವೇತ,
ಪ್ರಥಮ ವರ್ಷ,
ಬಿ.ಎಸ್ಸಿ. ಕೃಷಿ.

## " ಪ್ರೀತಿ "

ಹುಡುಕುತಿರಲು ಇನ್ನ್ಯಾರಲೋ ಪ್ರೀತಿಯನು...
ಮರೆಯಬಹುದೇ ನೀ ಹೆತ್ತವರಲಿ ಅದನು..?
ಒತ್ತೆಯಿಡುತಿರಲು ಪ್ರೀತಿಗಾಗಿ ಕನಸನು...
ಮರೆಯಬಹುದೇ ನೀ ಕನಸಿಗಾಗಿ ಅವರ ತ್ಯಾಗವನು..?
ಎದುರು ನಿಲ್ಲಲು ಪ್ರೀತಿಗಾಗಿ ನೀನು...
ಮರೆಯಬಹುದೇ ನೀ ಬೆನ್ನಟ್ಟುವ ಅವರ ಆಸರೆಯನು..?
ಅವಳ ಪ್ರೀತಿಯೊಳಿರಲು ನೀನು...
ಅವರ ಪ್ರೀತಿ ಮರೆಯಬಹುದೇನು..?

**~ ನಾನು**

## " ತಾಯಿ ನಾ ನಿನ್ನ ಸಾಕುವೆ "

ಅಮ್ಮ ನಾ ನಿನ್ನ ಮಗನವ್ವ,
ನೀ ನನ್ನ ಮಗವವ್ವ,
ನಿನ್ನ ನಾ ನೋಡುವೆ
ಪ್ರೀತಿಸಿ ಸುಖ ಪಡುವೆ
ತಾಯಿ ನಾ ನಿನ್ನ ಸಾಕುವೆ.

ಅಮ್ಮ ನಾ ಹೆಣ್ಣಲ್ಲ, ಆದರೆ
ನನಗೆ ಕಣ್ಣಿಲ್ಲ ಅಂತೇನಿಲ್ಲ
ಅಮ್ಮ ನಾ ನೋಡುವೆ
ನನ್ನ ಹೆತ್ತ ಕರುಳ ನಗಿಸುವ
ತಾಯಿ ನಾ ನಿನ್ನ ಸಾಕುವೆ.

ನೀ ತಾಯಿ ನನಗೆಂದು
ನಾ ತಾಯಿಯಾಗುವೆ ನಿನಗೆಂದೆಂದೂ
ಕರುಳ ಕತ್ತರಿಸಿ ಬಂದ ನಾನು
ಕರುಣೆ ಇಲ್ಲದವನಾಗುವೆನೆ?
ತಾಯಿ ನಾ ನಿನ್ನ ಸಾಕುವೆ.


ಆಹಾರ ಸೇವಿಸುವುದು ನಿನಗೆ
ಅದರಲ್ಲೂ ಪಾಲು ನನಗೆ
ಇಂತ ಕರುಣದಾತೆಯ ನಾ ಕಾಣುವೆ
ಕಂಡು ಕೊಂಡಾಡುವೆ.
ತಾಯಿ ನಾ ನಿನ್ನ ಸಾಕುವೆ.

ಜೀವನದಲ್ಲಿ ಫಲವ ಕೊಡುವೆ
ಫಲವು ಫಲಿಸುವವರೆಗೂ
ಪಕ್ಕದಲ್ಲಿ ನಾನಿರುವೆ ತಾಯಿ
ನಿನ್ನ ಸಾಕುವೆನವ್ವ.
ತಾಯಿ ನಾ ನಿನ್ನ ಸಾಕುವೆ.


~ ಪ್ರಜ್ವಲ್,
ನಾಲ್ಕನೆಯ ವರ್ಷ,
ಬಿ.ಎಸ್ಸಿ. ಕೃಷಿ.


## " ಹೆಣ್ಣು ಮಾತೃ ಹೃದಯೀ ನಿಧಿ "

ನಿನ್ನ ಕಾಮಕ್ಕೆ ಕೈಗೊಂಬೆಯಲ್ಲ ಅವಳು,
ಪ್ರೀತಿಯ ಸಾಕಾರ ಮೂರ್ತಿ.
ನಿನ್ನ ಮೋಹಕ್ಕೆ ವಸ್ತುವಲ್ಲ ಅವಳು,
ಮಾತೃ ಹೃದಯೀ ನಿಧಿ.
ನಿನ್ನ ಮೋಹಪಾಶ ಬಂಧನಕ್ಕೆ
ಬಂಧಿಸುವ ಮುನ್ನ,
ನೀ ಅರಿತುಕೋ
ಅವಳ ಅಂತರಂಗವನ್ನ;


ತೇಜಸ್ವಿನಿ

ಅವಳ ಭಾವನೆಗಳನ್ನ...
ಅವಳ ಅಂತರಂಗವನ್ನ ಹೊಕ್ಕಿದ್ದೇ ಆದರೆ,
ಕಾಣುವೆ ಅಲ್ಲಿ;
ತಾಯಿಯ ಮಮತೆಯನ್ನು,
ಸಹೋದರಿಯ ಪ್ರೀತಿಯನ್ನು,
ಸ್ನೇಹಿತೆಯ ಸ್ನೇಹವನ್ನು.
ಬೆಟ್ಟದಷ್ಟು ನಂಬಿಕೆ ಅವಳಿಗೆ
ನಿನ್ನ ಮೇಲೆ,
ಅದನ್ನು ಉಳಿಸಿಕೊಳ್ಳುವತ್ತ ನೀನಿರು.
ಹುಸಿಯಾದಲ್ಲಿ ನಿನ್ನ ನಂಬಿಕೆಯ ಆಯಸ್ಸು,
ಘಾಸಿಗೊಳ್ಳುವುದು ಅವಳ ಮನಸ್ಸು.
ಹೆಣ್ಣನ್ನು ನಾರಿಯಾಗಿಯೇ ಬಿಡಿ,
ಕೆಣಕಿ ಮಾರಿಯನ್ನಾಗಿಸಬೇಡಿ.


~ ಜ್ಯೋತಿ ಹಿರೇಮಠ,
ನಾಲ್ಕನೆಯ ವರ್ಷ,
ಕೃಷಿ ಇಂಜಿನಿಯರಿಂಗ್.

## " ಅಮ್ಮ ಮಣಿಕರ್ಣಿಕಾ "

ತನ್ನೊಡಲಲ್ಲಿ ಮುದ್ದು ಮಗುವೊಂದು ಚಿಗುರೊಡೆಯುತ್ತಿದೆ ಎಂಬುದು ತಿಳಿಯುತ್ತಿದ್ದಂತೆಯೇ ಹೆಣ್ಣು ತಾಯ್ತನದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಳ್ತಾಳೆ. ತನ್ನನ್ನ ತಾನು ಸವೆಸಿಕೊಂಡು ತನ್ನ ಅಸ್ತಿತ್ವವನ್ನೇ ಮಾಂಸದ ಮುದ್ದೆಯಾಗಿಸಿಕೊಂಡು ಗರ್ಭ ಧರಿಸಿದ ದಿನದಿಂದಲೇ ಶಿಲ್ಪಿಯಾಗಿಬಿಡುತ್ತಾಳೆ. ಹಂತ ಹಂತವಾಗಿ ಮನೆ ಕಟ್ಟಿದಂತೆ ಮಗುವಿನ ಜೀವನ ರೂಪಿಸುವ ಅಮ್ಮ, ತನ್ನಾಯುಷ್ಯದ ಪದರಗಳನ್ನ ಕಳಚುತ್ತಾ ಹೋಗುತ್ತಾಳೆ. ತನ್ನ ಮಗುವನ್ನ ಒಬ್ಬಂಟಿಯಾಗಿ ಬಿಟ್ಟು ಎಲ್ಲಿಗಾದರೂ ಹೊರಟಾಗ ತನ್ನ ಉದರದ ಪಿಂಡ ಕಿತ್ತು ಕಂದಕಕ್ಕೆ ಎಸೆದಂತೆ ಭಾಸವಾಗುತ್ತದೆ ಎನ್ನುತ್ತಾಳೆ ಅಮ್ಮಾ.
ಒಬ್ಬ ಸಾಮಾನ್ಯ ಹೆಣ್ಣು ದೈವತ್ವಕ್ಕೇರುವ ಪಯಣ ಆರಂಭವಾಗೋದೇ ಆಗ. ತೊದಲು ನುಡಿವ ಕಂದನ ಬಾಯಿಂದ ಮೊದಲ ಬಾರಿಗೆ ಬಂದ 'ಅಮ್ಮ' ಎಂಬ ಪದಕ್ಕೆ ಹೆಣ್ಣಿನ ಬದುಕನ್ನೇ ಸಾರ್ಥಕಗೊಳಿಸುವ ಶಕ್ತಿಯಿದೆ!
ಆ ಮಗುವೆಂಬ ಶಕ್ತಿಯ ಸೌಖ್ಯಕ್ಕೆ ಸಕಲವನ್ನೂ ಧಾರೆಯರೆಯಲು ತಯಾರಾಗುವ ತ್ಯಾಗದ ತತ್ಸಮಾನ ರೂಪವೇ ಅಮ್ಮಾ.
ತಾಯಿ ಎಂಬ ಶಿಲ್ಪಿಗೆ, ಆಕಾರವಿಲ್ಲದ ಕಲ್ಲನ್ನೂ ಸಂಸ್ಕಾರದ ಉಳಿಪೆಟ್ಟಿನಿಂದ ಪೂಜನೀಯ ಮೂರ್ತಿಯನ್ನಾಗಿಸುವ ತಾಕತ್ತಿದೆ. ಇಂದು ಮಹೋನ್ನತವಾದದ್ದನ್ನು ಸಾಧಿಸಿದ ಶೇ.೯೫ ರಷ್ಟು ಜನರ ಸಾಧನೆಯಲ್ಲಿ ನಿಸ್ಸಂದೇಹವಾಗಿ ಅವರಮ್ಮನ ಬೆವರಿರುತ್ತದೆ, ಆಕೆಯ ನಿದ್ದೆಯಿಲ್ಲದ ರಾತ್ರಿಯಿದೆ, ಹಸಿದ ಹೊಟ್ಟೆಯ ತ್ಯಾಗವಿದೆ ಮೈಮೇಲೆ ಮರ ಬಿದ್ದರೂ ಮಗುವನ್ನು ಹೊಟ್ಟೆಯಲ್ಲಿ ರಕ್ಷಿಸುವ ಇನ್ಕ್ಯುಬೇಟರ್ ಈ ಅಮ್ಮ.
ಪ್ರಜ್ಞಾವಂತ ಮಕ್ಕಳು ಅಮ್ಮಾ ಇಂದು "ಮದರ್ಸ್ ಡೇ" ಬಾರಮ್ಮಾ ಎಂದಾಗ, ಮರೆಯುವ ಮಕ್ಕಳಿಗೆ ಕಂದಾ ತಾಯಿಯ ದಿನಾಚರಣೆ, ನಾಳೆ ನಿನ್ನ ಬರ್ತಡೇ ಎಂದು ಮಗಳ ಸ್ನಾನಕ್ಕೆ ಬಿಸಿನೀರು, ತಲೆಗೆ ಎಣ್ಣೆ ರೆಡಿ ಮಾಡುತ್ತಾಳಲ್ಲಾ ಅವಳೇ ಅಮ್ಮಾ.
ಸ್ವಂತ ಮಗನಿಂದ ಪರಿತ್ಯಕ್ತಳಾಗಿ ವೃದ್ಧಾಶ್ರಮದ ಮೂಲೆಯೊಂದರಲ್ಲಿ ಕೂತರೂ ಅದೇ ಮಗನ ಬಾಲ್ಯವನ್ನು ನೆನಪಿಸಿಕೊಂಡು ನಸುನಗೆಬೀರುವ, ಆತನ ಭವಿಷ್ಯ ಚೆನ್ನಾಗಿರಲೆಂದು ಎರಡೂ ಕೈಯೆತ್ತಿ ಹಾರೈಸುವ ಆ ದೈವತ್ವದ ಸಾಕಾರ ಮೂರ್ತಿಯನ್ನು ಪುಟ್ಟ ಲೇಖನದಲ್ಲಿ ಕಟ್ಟಿಹಾಕೋಕೆ ಸಾಧ್ಯಾನಾ..?
ಆಕೆಯ ಬಗ್ಗೆ ಬರೆಯುವುದಕ್ಕೆ ಹೋದರೆ ಭಾಷೆ ಬಡವೆನಿಸುತ್ತದೆ. ಯಾವುದೇ ಪದದಲ್ಲಿ ಅವಳ ವರ್ಣನೆ ಕಳಾಹೀನವೆನಿಸುತ್ತದೆ , ಆಕೆಯ ಪಾತ್ರದೆದುರು ಸಾಹಿತ್ಯವೇ ಸೋತುಬಿಡುತ್ತದೆ! ಒಂದು ಪದದಲ್ಲಿ, ಒಂದು ವಾಕ್ಯದಲ್ಲಿ, ಒಂದು ಕತೆಯಲ್ಲಿ, ಒಂದು ಪುಸ್ತಕದಲ್ಲಿ ಹಿಡಿದಿಡಲು ಸಾಧ್ಯವಾಗದ ಮಹೋನ್ನತ ವ್ಯಕ್ತಿತ್ವ ಅಮ್ಮನದು.

~ ಕೀರ್ತನ ನಾಯಕ್ .ಎನ್
ದ್ವಿತೀಯ ವರ್ಷ,
ಬಿ. ಎಸ್ಸಿ. ಕೃಷಿ

## " ನನ್ನವಳು "

### (ಕಲ್ಪನೆ–ವಾಸ್ತವತೆ)

ಈ ಸುಂದರ ಜೀವನದ ದಾರಿಯಲ್ಲಿ ಎಷ್ಟೇ ತಿರುವುಗಳಿದ್ದರೂ, ಒಬ್ಬರು ನಮಗಾಗಿ ಕಾಯುತ್ತಿರುವರೆಂದರೆ ಎಷ್ಟು ಹಾಸ್ಯಾಸ್ಪದ ಅಂತ ಅನ್ನಿಸಬಹುದು. ಕೆಲವೊಮ್ಮೆ ನಾನ್ ಹೇಳೋ ಫಿಲಾಸಫಿಗೂ ಕೆಲವೊಬ್ರ ಮನಸ್ಥಿತಿಗೂ ಹೊಂದಾಣಿಕೆನೆ ಆಗಲ್ಲ, ಆದ್ರೆ ನಾನೀಗ ಅವ್ರ ಬಗ್ಗೆ ಮಾತಾಡ್ತಾ ಇಲ್ಲ, ಇದನ್ನ ಯಾರು ಅನುಭವಕ್ಕೆ ತಗೊಂಡಿರ್ತಾರೋ ಅವ್ರಿಗೆ ಮಾತ್ರ ಇದು ಅನ್ವಯಿಸುತ್ತೆ. ಪ್ರೌಢಾವಸ್ಥೆಯಲ್ಲಿ ಬರುವ ಭಾವನೆಗಳು ಎಳೆಯದರಲ್ಲಿ ಬಂದಿದ್ದರೆ ಎಷ್ಟು ಚಂದ ಅಂತ ಒಂದಲ್ಲ ಒಂದು ರೀತಿಯಲ್ಲಿ ಮನಸ್ಸಿಗೆ ಬಂದಿರಬಹುದು. ಇದನ್ನ ತಪ್ಪೂ ಅಂತಾನೂ ಹೇಳೋಕಾಗಲ್ಲ ಯಾಕಂದ್ರೆ ನಾವು ಜೀವನದ ಎಲ್ಲ ಹಂತಗಳನ್ನೂ ದಾಟಬೇಕು ಕೆಲವೊಮ್ಮೆ ಇಷ್ಟ ಇದ್ದರೂ, ಇಲ್ಲದಿದ್ದರೂ ತಲೆದೂಗಲೂ ಬೇಕು.ಸಾಮಾನ್ಯವಾಗಿ ಎಲ್ರಿಗೂ ಈ ಅನುಭವ ಆಗಿರುತ್ತೆ ಅಂತ ಭಾವಿಸಿದ್ದೇನೆ. ಆಗಿಲ್ಲದೆ ಇದ್ದೋರು ಜೀವನದ ಮಜಲುಗಳನ್ನು ಹುಡುಕೋಕೆ ಹೋಗಿಯೇಯಿಲ್ಲ ಎಂಬುದು ನನ್ನ ಅನಿಸಿಕೆ.



ಹೀಗೆ ಶಾಲೇಲಿ ಓದುತ್ತಾ, ಪ್ರತಿ ದಿನ ಒಬ್ಬರನ್ನೊಬ್ಬರು ನೋಡುತ್ತಾ ಬೆಳೆದವರು ನಾವು, ಸುಂದರ ವಾತಾವರಣ ಓದೋದು ಒಂದೇ ಗುರಿಯಾಗಿದ್ದ ಆ ಸಮಯದಲ್ಲಿ ಅವಳ ಬಗ್ಗೆ ಅಷ್ಟೊಂದು ಗಮನವೇನು ಇರಲಿಲ್ಲ,

ಸಾಮಾನ್ಯರಂತೆ ಸಾಮಾನ್ಯವಾಗಿ ಇದ್ದವಳಲ್ಲಿ ಕಾಲೇಜ್ ಗೆ ಹೋದ ಮೇಲೆ ಆಶ್ಚರ್ಯಕರ ಬದಲಾವಣೆ ಕಂಡೆ, ಕೆಲವೊಮ್ಮೆ ಇವಳೇನ ನಮ್ಮ ಜೊತೆಗೆ ಇದ್ದಿದ್ದು , ಅಷ್ಟು ವರ್ಷಗಳ ಕಾಲ ಜೊತೆಗೆ ವಿಹರಿಸಿದ್ದು ಅಂತ ಅನ್ನಿಸಿದ್ದುಂಟು, ಆದ್ರೆ ಅದು ಮನವರಿಕೆ ಆಗಿದ್ದು ತುಂಬಾ ಲೇಟಾಗಿ, ಯಾವಾಗ ಈ ಡಿಗ್ರೀ ಕಾಲೇಜ್ ಗೆ ಹೋಗೋಕೆ ಶುರುಮಾಡಿದೇವೋ ಅವಾಗಿಂದ . " ಹದಿಹರೆಯದ ವಯಸ್ಸು ಹುಚ್ಚು ಕೋಡಿಯ ಮನಸ್ಸು " ಅನ್ನೋದು, ಅರಿತರೂ ಕೂಡ ಮೈ ಮರೆಯುವಂತ ಮನಸ್ಥಿತಿಗೆ ಜಾರಿಸಿಬಿಡುತ್ತದೆ ಈ ಇಪ್ಪತ್ತು – ಇಪ್ಪತ್ತೊಂದರ ಪ್ರಾಯ, ಮತ್ತೆ ಕೆಲವು ಮರೆಯಲಾಗದಂತಹ ನೆನಪುಗಳಿಗೂ ನೂಕಿಬಿಡುತ್ತದೆ ಈ ಪೋಲಿ ಹರೆಯ, ಈ ವಯಸ್ಸಲ್ಲಿ ನಡೆಯುವ ಕುತೂಹಲಕಾರಿ ಘಟನೆಗಳು ಭೌತಿಕ ಪ್ರಪಂಚವನ್ನೇ ಮರೆಸಿಬಿಡುತ್ತವೆ. ಅದನ್ನ ಪ್ರೇಮವೆನ್ನಲೋ, ಸ್ನೇಹವೆನ್ನಲೋ ನಾನಂತೂ ಕಾಣೆ, ಆದ್ರೆ ಆ ಭಾವನೆ ಮಾತ್ರ ಬೇರೆ ಲೋಕದಲ್ಲಿ ತೇಲಾಡಿಸುವುದಂತು ಖಚಿತ, ಮಾತನಾಡುತ್ತಾ ಇರುವಷ್ಟು ದಿನ ಅದು ಸ್ಪಷ್ಟ ಮತ್ತು ಅರ್ಥಪೂರ್ಣವೆನಿಸುತ್ತದೆ. ಕೆಲವೊಮ್ಮೆ ಮಾತನಾಡದಿರುವುದಕ್ಕೆ ಎಲ್ಲಿಲ್ಲದ ಬೇಸರ ಮತ್ತು ಕಾತರವನ್ನೂ ಸೃಷ್ಟಿಸುತ್ತದೆ. ಅದಕ್ಕೆ ಮೋಹವೆಂದು ಹೆಸರಿಡಲಾಗದು ಅದು ಪದಗಳಿಂದ ಹೆಸರಿಸುವ ಬಂಧವಲ್ಲ, ಮನಸ್ಸಿಂದ ಅನುಭವಿಸುವ ಭಾವ.

ಓಕೆ ಈಗ ವಾಸ್ತವಕ್ಕೆ ಬರೋಣ, ನನ್ನವಳು!! ನೋಡೋಕೆ ಅಷ್ಟೊಂದು ಸುಂದರಿಯೇನಲ್ಲ ಆದರೂ ಅವಳ ಅಂದವನ್ನ ಅಲ್ಲಗಳೆಯುವಂತಿಲ್ಲ, ಚಂದ ಕಾಣೋಕೆ ಮುಖ ಲಕ್ಷಣನೇ ಬೇಕಂತೇನಿಲ್ಲ ಅದಕ್ಕೆ ವ್ಯಕ್ತಿತ್ವನೂ ಸಪೋರ್ಟ್ ಮಾಡಬೇಕಾಗಿ ಬರುತ್ತದೆ. ಇಲ್ಲಾಂದ್ರೆ ಎಂತಾ ಚೆಲುವೆ ಇದ್ರೂನು ನಶ್ವರ ರೂಪ ಪಡ್ಕೊಂಡ್ ಬಿಡುತ್ತಾರೆ. ಅವಳ ಮಾತು, ಅವಳ ನಗು, ಅವಳ ನೋಟ ಒಮ್ಮೊಮ್ಮೆ ಮನದೊಳಗೆ ಏನೇನೋ ಪುಳಕಗಳನ್ನು ಸೃಷ್ಟಿಸಿದ್ದಂತೂ ನಿಜ. ಅವಳ ಹಣೆಯಲ್ಲಿನ ಕುಂಕುಮದ ಸೊಬಗು ಇಂದಿಗೂ ಮೈ–ಮನ ತಣಿಸುತ್ತದೆ.

ಮೂಗುತಿಯ ಚೆಲುವೆ ನನ್ನಾಕೆ
ಬೇಡವೆಂದರೂ ಇಳಿದಿಹಳು ಈ ಮನಕೆ
ಅವಳ ಮೈ ಮಾಟದ ಸೊಬಗಿಗೆ ನಾ ಸೋತೆ
ಅಲೆಯಂತೆ ಚುರುಕಿವಳು
ಕೂಗಿದರು ಬರಳು ಕಡಲ ಕರೆಗೆ
ಮಾತನಾಡುವ ಮುನ್ನ ಇರಬೇಕು
ನಾನು ಸ್ವಲ್ಪ ಜೋಕೆ...

ಆದರೆ ಈ ಭಾವನೆಗೆ ಪ್ರೀತಿಯ ಹೆಸರಿಡಲು ಒಪ್ಪಲೊಲ್ಲಳು, ನಾನೂ ಸ್ನೇಹವೆಂದೆ ಮುಂದುವರೆಯುತ್ತಿದ್ದೇನೆ, ಬಂಧ ಬಿಗಿಯಿರುವಾಗ ಸಂಬಂಧದ ಚಿಂತೆ ಯಾಕೆ ಅಲ್ವಾ!! ಯಾವುದೋ ಒಂದು ರೀತಿಯಲ್ಲಿ ಚೆನ್ನಾಗಿ ಇದ್ರೆ ಸಾಕು, ನಾನ್ ಮೊದಲೇ ಹೇಳಿದ ಹಾಗೆ ಎಲ್ಲರ ಜೀವನದಲ್ಲೂ ಒಬ್ಬ ವಿಶೇಷ ವ್ಯಕ್ತಿಯ ಆಗಮನ ಆಗಿಯೇ ಇರುತ್ತದೆ ಅದು ಕೇವಲ ಒಂದು ಭಾಗ ಅಷ್ಟೇ, ಪ್ರೀತಿ – ಪ್ರೇಮ ಅಂತ ಮುನ್ನೆಡೆದಾಗ ಕುಟುಂಬದ ಅಡೆ – ತಡೆಗಳು, ಜವಾಬ್ದಾರಿಯ ಸವಾಲುಗಳೂ ನಮ್ಮ ಇಷ್ಟಗಳಿಗೆ ತೊಡಕಾಗಿ ಕಾಡಿಬಿಡುತ್ತವೆ. ಅಷ್ಟೆಲ್ಲ ಇದ್ದು ಮುಂದುವರಿಯೋಕೆ ಯಾವುದೇ ಒಬ್ಬ ಮಧ್ಯಮವರ್ಗದ ಕುಟುಂಬಕ್ಕೆ ಸೇರಿದ ವ್ಯಕ್ತಿಗೆ ಸಾಧ್ಯವೇ??...ಇಲ್ಲ, ಹಾಗೇ ನಾನೂ ಕೂಡ. ಹೇಗೋ ಆಕಸ್ಮಿಕವಾಗಿ ಪರಿಚಯವಾಗಿ ಬದುಕಿನ ಒಂದು ಘಟ್ಟವನ್ನಂತು ಕಳಿತೀವಿ.ಇವೆಲ್ಲವೂ ಇದ್ದಾಗಲೇ ನಾವು ಪ್ರೌಢಾವಸ್ಥೆಯನ್ನ ದಾಟಿ ಬಂದಿದ್ದೇವೆ ಅನ್ನೋಕೆ ಉಳಿಯುವ ಸಾಕ್ಷಿಗಳು.

ಚೊಕ್ಕ ಮುಖದ ಚೆಲುವೆ
ಮಾತನಾಡಳು ಅಷ್ಟೊಂದು ಈ ನಡುವೆ
ಆದರೂ ನಾನೊಂದೇ ಕೇಳುವೆ
ತಪ್ಪಿದ್ದರೆ ಕ್ಷಮಿಸಿಬಿಡು ನನ್ನೊಲವೆ...

ಏನೋ ಪ್ರಾಸಪದ ಸಿಕ್ತು ಅಂತ ಬರ್ದಿದ್ದು ರಿಯಾಲಿಟಿ ಕೆಳಗಿದೆ ನೋಡಿ...

ಕೆಲವೊಂದು ಸಂಬಂಧಗಳು ಪರ್ಮನೆಂಟ್ ಆಗಿರ್ತಾವೆ, ಕೆಲವೊಂದು ಟೆಂಪರ್ವರಿ, ಅದ್ರಲ್ಲಿ ಪ್ರೀತಿ ಅನ್ನೋ ಭಾವ ಕೂಡ ಒಂದು, ನಮ್ಮ ಮನಸ್ಥಿತಿ ನ ಯಾವ್ ತರ ಇಟ್ಕೊಳ್ತಿವಿ ಅನ್ನೋದರ ಮೇಲೆ ಅದು ಅವಲಂಬಿತವಾಗಿರುತ್ತದೆ, ಅದಕ್ಕೆ ಸ್ಪಂದಿಸುವ, ಕ್ಷಮಿಸುವ ಹಾಗೂ ಕಾಳಜಿ ತೋರುವ ಗುಣ ಇಬ್ಬರಲ್ಲೂ ಇರಬೇಕಾಗುತ್ತದೆ. ಅದಕ್ಕೆ ಹೇಳಿದ್ದು ಸಮಾನ ಮನಸ್ಕರರಿಗೆ ಮಾತ್ರ ಈ ಪ್ರೀತಿ ಜೊತೆಗೆ ಸಮಾನ ಆಲೋಚನೆಗಳು ಕೂಡ ಜೊತೆಗೂಡಿದಾಗ ಮಾತ್ರ ಆ ಬಂಧಕ್ಕೆ, ಬಾಂಧವ್ಯಕ್ಕೆ ಅರ್ಥ ಸಿಗೋದು.

ಅವ್ರಿಗೆ ಇಷ್ಟ ಇಲ್ಲ ಅಂದ್ರು ಕೂಡ ಅವ್ರೇ ಬೇಕು ಅನ್ನೋದು ಮೂರ್ಖತನ, ಎಲ್ಲಿದ್ರೂ ಚೆನ್ನಾಗಿರಲಿ ಅನ್ನೋದು ನಿಮ್ಮತನ ಆಗಿರಲಿ. ಕಲ್ಪನೆಯ ಲೋಕದಲ್ಲಿ ಮುಳುಗಿ ವಾಸ್ತವತೆಯನ್ನು ಮರೆಯಬಾರದು, ಮುಂದೊಂದು ದಿನ ನಾನೇನ ಆ ತಪ್ಪುಗಳನ್ನ ಮಾಡಿದ್ದು ಅನ್ನಿಸಬಾರದು, ಅವು ಸುಂದರ ನೆನಪುಗಳಾಗಿ ಉಳಿಯಬೇಕು. ಅದಕ್ಕೆ ಜಾಣ್ಮೆಯ ಹೆಜ್ಜೆ ಇಡುತ್ತಾ ಮುನ್ನಡೆದು , ನಮ್ಮ ಯಶಸ್ಸು ಅನ್ನುವ ಗುರಿ ಮುಟ್ಟಬೇಕು ಆಗ ಎಲ್ಲಾ ನಮ್ಮೊಟ್ಟಿಗೆ ಇರುವಹಾಗೆ ಭಾಸವಾಗುವುದು, ಅಂದ್ರೆ ಅವ್ಳೆ ಸಿಗ್ತಾಳೆ ಅಂತ ಅಲ್ಲ ಅದಕ್ಕಿಂತ ದುಪ್ಪಟ್ಟು ಖುಷಿಗಳು ನಿನಗಾಗಿ ಕಾಯ್ತಿದಾವೆ ಅಂತ ಅಷ್ಟೇ..

~ ಬಸವರಾಜ ಜಿ,
ತೃತೀಯ ವರ್ಷ,
ಬಿ.ಎಸ್ಸಿ. ಕೃಷಿ

# ಕಲೆ ಮತ್ತು ಸಂಸ್ಕೃತಿ





## " ದೈವ ನಡೆ "

" ಕರಾವಳಿಯ ಬೀಡು, ನಮ್ಮ ತುಳುನಾಡು,
ಅಲ್ಲಿ ಅಡಗಿಹುದು, ಆಚರಣೆಗಳ ಗೂಡು,
ಆ ಕಡೆಗೆ ಒಮ್ಮೆ, ದೃಷ್ಟಿ ಹರಿಸಿ ನೋಡು,
ಕಾಣುವೆ ನೀನು, ದೈವ ನಡೆಯ ಸೊಗಡು."

"ತುಳುನಾಡು" ಕರ್ನಾಟಕದ ಒಂದು ಅವಿಭಾಜ್ಯ ಅಂಗ. ಅನೇಕ ತರಹದ ಪರಂಪರಾಗತ ಆಚರಣೆಗಳು ಇನ್ನೂ ಜೀವಂತವಾಗಿರುವ ತಾಣ. ಅಂತಹ ಆಚರಣೆಗಳಲ್ಲಿ ಒಂದು ದೈವಾರಾಧನೆ. ದೈವಾರಾಧನೆಯು ಪಂಚಭೂತಗಳಲ್ಲಿ ಲೀನವಾಗಿರುವ ಅಭೌತಿಕ ಶಕ್ತಿಯ ಆರಾಧನೆ ಎಂದೇ ಹೇಳಬಹುದು. ತುಳುವರು ದೈವಗಳ ಪೂಜೆಯನ್ನು, ದೇವತಾ ಪೂಜೆಯಷ್ಟೇ ಪ್ರಾಮುಖ್ಯತೆಯಿಂದ ನಡೆಸುವುದು ವಿಶೇಷ.



ತುಳುವರು ಮೂಲತಹ ದ್ರಾವಿಡರು.ಈ ಹಿಂದೆ ದ್ರಾವಿಡರು ಈ ಭಾಗಗಳಲ್ಲಿ ಪ್ರಮುಖವಾಗಿ ದೈವಗಳ ಆರಾಧನೆಯಲ್ಲಿ ತೊಡಗಿದ್ದರು. ಕಾಲಕ್ರಮೇಣ ವೈದಿಕತೆಯ ಆಗಮನದ ಬಳಿಕ ದೇವತಾರಾಧನೆಯೂ ಸಹ ಪ್ರಾಮುಖ್ಯತೆಯನ್ನು ಪಡೆದು, ಅದರೊಂದಿಗೆ ದೈವಾರಾಧನೆಗೂ ವೈದಿಕತೆಯ ಗಾಳಿ ಬೀಸಿದೆ.

ಮೂಲತಹ ದೈವಗಳನ್ನು ವನ್ಯಪ್ರದೇಶದಲ್ಲಿ, ಅಂದರೆ ಸಾಮಾನ್ಯವಾಗಿ ಕಾಡಿನಲ್ಲಿ ಕಲ್ಲಿನ ರೂಪದಲ್ಲಿ, ಕಾಡಿನ ಪುಷ್ಪಗಳನ್ನು ಬಳಸಿ ಪೂಜಿಸುತ್ತಿದ್ದರು ಎಂದು ತಿಳಿದುಬರುತ್ತದೆ.

ಇದಕ್ಕೆ ಪುಷ್ಟಿ ನೀಡುವಂತೆ ಸಿಗುವ ದೈವದ ನುಡಿಕಟ್ಟು ; 'ಪೊಟ್ಟು ಕಲ್ಲ್ ,ಕಾಡ ಪುಷ್ಪ, ತೋಡನೀರ್ ತಳ್ತುದ್ ಕೈ ಮುಗ್ಯನ ಭಕ್ತಿಡ್ ಯಾನ್ ಉಲ್ಲೆ' ಅಂದರೆ, ಸಾಮಾನ್ಯ ಕಲ್ಲಿಗೆ ಕಾಡಿನ ಪುಷ್ಪ , ಹೊಳೆ ನೀರು ಚುಮುಕಿಸಿ, ಕೈಮುಗಿದು ಪ್ರಾರ್ಥಿಸುವ ಭಕ್ತಿಯಲ್ಲಿ ನಾನಿದ್ದೇನೆ ಎಂಬ ಅರ್ಥ ಬರುತ್ತದೆ. ಪೂರ್ವಜರು ಇಂತಹ ದೈವಗಳ ಹೆಸರಲ್ಲಿ ಅನೇಕ ಬನಗಳನ್ನು ಹೆಸರಿಸಿದ್ದರು.ಬಹುಶಃ ಮುಂದಿನ ಪೀಳಿಗೆಯಲ್ಲಿ ಆಗುವ ವನ್ಯ ನಾಶದ ಸುಳಿವು ಆಗಲೇ ಸಿಕ್ಕಿತ್ತೋ, ಏನೋ...?

ಹಾಗಾದರೆ ಆ ದೈವಗಳಲ್ಲಿ ಎಷ್ಟು ವಿಧ? ಅವುಗಳ ಹೆಸರೇನು? ದೈವದ ಆರಾಧನೆಗಳನ್ನು ಹೇಗೆ ನಡೆಸುವುದು? ತಿಳಿದುಕೊಳ್ಳೋಣ ಮುಂದಿನ ಸಂಚಿಕೆಯಲ್ಲಿ....

~ ಭರತೇಶ್ ,
ತೃತೀಯ ವರ್ಷ,
ಬಿ.ಎಸ್ಸಿ ಕೃಷಿ.

### ***ತೂತು ಮಡಿಕೆ – ತುಂಬದ ಮಡಿಕೆ***

- *೯೬ ನೇ ವಯಸ್ಸಿನಲ್ಲಿಯೂ ಸಹ ಚೆನ್ನಾಗಿ ಓದಿ ಕಾರ್ತಿಯಾನಿ ಅಮ್ಮನವರು ೨೦೧೮ ರ ಸಾಕ್ಷರತಾ ಪರೀಕ್ಷೆಯಲ್ಲಿ ಶೇ.೯೮ ಅಂಕಗಳನ್ನು ಗಳಿಸಿದ್ದರು.*
- *ಭಾರತೀಯ ರೈಲ್ವೇ ಜಗತ್ತಿಗೆ ೮ನೆಯ ಹಾಗು ದೇಶಕ್ಕೆ ಮೊದಲ ಉದ್ಯೋಗ ಒದಗಿಸುವ ಕ್ಷೇತ್ರವಾಗಿದೆ.*
- *ಶಿಶುಗಳ ಹೊಟ್ಟೆ ಅಕ್ರೋಟ ಬೀಜಗಳ (Walnut) ಗಾತ್ರದಷ್ಟಿರುತ್ತದೆ.*
- *ಬಸವನಹುಳು ಮೂರು ವರ್ಷಗಳ ಕಾಲ ನಿದ್ರಿಸಬಲ್ಲದು.*
- *ಪ್ರಪಂಚದಲ್ಲಿ ಭಾರತವು ಅತಿ ದೊಡ್ಡ ಅಗ್ಗದ ಇಂಟರ್ನೆಟ್ ದರವನ್ನು ಹೊಂದಿರುವ ದೇಶವಾಗಿದ್ದರೆ, ಜಿಂಬಾಬ್ವೆ ದೇಶದಲ್ಲಿ ೧ ಜಿ.ಬಿ. ಇಂಟರ್ನೆಟ್ $೭೫.೨೦ (₹೫೪೮೯) ಆಗುತ್ತದೆ.*
- *ಜಗತ್ತಿನ ಮೊದಲ ಬೆಣಚು ಕಲ್ಲಿನಿಂದ ನಿರ್ಮಿಸಿದ ದೇವಾಲಯ ತಮಿಳುನಾಡಿನಲ್ಲಿರುವ ತಂಜಾವೂರಿನ ಬೃಹದೇಶ್ವರ ದೇವಾಲಯವಾಗಿದೆ.*
- *ಹಿಮಾಲಯದಲ್ಲಿ ಕಂಡುಬರುವ ಹಿಮಚಿರತೆಗಳಿಗೆ ಘರ್ಜಿಸಲು ಬರುವುದಿಲ್ಲ.*

## "ಮೆದುಳಿಗೆ ಮೇವು"

೧) .೨೦೨೦ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಯಾರು?

೧. ಜೋಗಿ ೨. ಚಂದ್ರ ಶೇಖರ ಕಂಬಾರ

೩. ಚೇತನ್ ಭಗತ್ ೪. ವೀರಪ್ಪ ಮೊಯ್ಲಿ

೨) ಕರ್ನಾಟಕದ ಪ್ರಪ್ರಥಮ ಅಣೆಕಟ್ಟು ಯಾವುದು ಮತ್ತು ಯಾವ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ ?

೧.ವಾಣಿ ವಿಲಾಸ ಸಾಗರ – ವೇದಾವತಿ ೨.ಕೆ. ಆರ್. ಎಸ್ – ಕಾವೇರಿ

೩.ಭದ್ರ – ಭದ್ರಾ ನದಿ ೪.ಮೇಕೆದಾಟು – ಕಾವೇರಿ

೩) IAHVB ಯ ವಿಸ್ತೃತ ರೂಪವೇನು?

೧. ಇನ್ಸ್ಟಿಟ್ಯೂಟ್ ಆಫ್ ಅನ್ಕಾಲಜಿ ಅಂಡ್ ವೈರಾಲಜಿ

೨. ಇನ್ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಅಂಡ್ ವೈರಾಲಜಿ

೩. ಇನ್ಸ್ಟಿಟ್ಯೂಟ್ ಅನಿಮಲ್ ಹೆಲ್ತ್ ಅಂಡ್ ವೆಟರ್ನರಿ ಬಯೋಲಾಜಿಕಲ್ಸ್

೪. ಮೇಲಿನ ಯಾವು ಅಲ್ಲ

೪) ಮೇರೆದಪ್ಪು ಯಾವ ಸಂಧಿಗೆ ಉದಾಹರಣೆಯಾಗಿದೆ.

೧. ಲೋಪ ಸಂಧಿ ೨. ಆಗಮ ಸಂಧಿ

೩. ಆಗಮ ಸಂಧಿ ೪. ಜಸ್ತ್ವ ಸಂಧಿ

೫) ಕನ್ನಡದ ಮೊಟ್ಟ ಮೊದಲ ಚಲನಚಿತ್ರ ಯಾವುದು?

೧. ಸತಿ ಸಾವಿತ್ರಿ ೨ .ಬೇಡರ ಕಣ್ಣಪ್ಪ

೩. ಸತಿ ಸುಲೋಚನಾ ೪. ಮಯೂರ

೬) ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಕೇಂದ್ರ ಎಲ್ಲಿದೆ?

೧. ಮುಂಬೈ ೨. ಹೈದ್ರಾಬಾದ್

೩. ಮಂಗಳೂರು ೪. ಮೈಸೂರು

೭) ಕರ್ನಾಟಕ ರತ್ನ ರಮಾರಮಣ ಇದು ಯಾರ ಬಿರುದು?

೧. ಕೃಷ್ಣದೇವರಾಯ ೨. ವಿಷ್ಣುವರ್ಧನ

೩. ಮಯೂರ ಚಕ್ರವರ್ತಿ ೪. ಇಮ್ಮಡಿ ಪುಲಿಕೇಶಿ

೮) ಕರ್ನಾಟಕದ ಕರಡಿ ರಕ್ಷಣಾ ಧಾಮ ಯಾವ ಜಿಲ್ಲೆಯಲ್ಲಿದೆ?

೧. ಉಡುಪಿ ೨. ಶಿವಮೊಗ್ಗ

೩. ಬಳ್ಳಾರಿ ೪. ಚಿತ್ರದುರ್ಗ

೯) ಕನ್ನಡದ ಸ್ಥಾನ ಸೂಚಕ ವಿಭಕ್ತಿ ಪ್ರತ್ಯಯ

೧. ಚತುರ್ಥಿ ೨. ಸಪ್ತಮಿ

೩. ಪಂಚಮಿ ೪. ದ್ವಿತೀಯ

೧೦) 'ಆವರಣ' ಕೃತಿಯ ಕರ್ತೃ?

೧. ಕುವೆಂಪು ೨. ಸುಧಾ ಮೂರ್ತಿ

೩. ಎಸ್.ಎಲ್.ಭೈರಪ್ಪ ೪. ಸಿದ್ದಲಿಂಗಯ್ಯ

## ಹೆಡ್ ಬೋರರ್

| | | | | | | | | |
|---|---|---|---|---|---|---|---|---|
| (1) ಮುಂ | | | ■ | (6) | ರು | | (13) | |
| | ■ | ■ | ■ | ■ | ■ | ■ | ಚ | ■ |
| (2) | | | (7) ತು | ■ | ■ | (14) | | |
| | ■ | ■ | | ■ | ■ | ■ | ಶೀ | ■ |
| | ■ | ■ | (8) | | (9) | ■ | | (12) |
| ■ | ■ | ■ | ■ | ■ | | ■ | ■ | |
| (3) | (4) | ರು | | ■ | (10) | ಕ | | |
| ■ | | ■ | ■ | ■ | ■ | ■ | ■ | ರಾ |
| (5) | | ಳು | | | ■ | (11) | ತ್ಯ | |

### ✔ ಎಡದಿಂದ ಬಲಕ್ಕೆ...

1. ಮುಂದಿನ +ತಲೆ
2. ದೃಢೀಕರಿಸು
3. ಮುಂದೆ ಮತ್ತು ಉರುಳು ಬೆಸೆದು ಹೆಣ್ಣಿಗೆ ಸೇರಿದೆ
5. ತುಟಿ ಅಂಚಲ್ಲೆ ಮರೆಯಾದ ನಗೆ
6. ಕೃಷ್ಣನು ಇದರಿಂದ ಗೋವರ್ಧನ ಎತ್ತಿದನು
8. ರೀತಿಯ ಪಾಲಿಸಿದ ಶಿವ
10. ನೃತ್ಯದ ಅನುಕರಾನವ್ಯಯ ಪದ
12. (ಬಲದಿಂದ ಎಡಕ್ಕೆ) ಹೆಣ್ಣಿನ ಹೆಸರು ಕೊನೆಗೆ ದೀರ್ಘವಾಗಿದೆ
14. ತಬ್ಬಲಿ

### ✔ ಮೇಲಿನಿಂದ ಕೆಳಗೆ...

1.ವಸಂತ ಕಾಲದ ನಂತರದ ಮೊದಲ ಮಳೆ

4. ಹಿಂದೆಯಿಂದ ಮುಂದೆಯಿಂದ ಹೇಗೆ ಓದಿದರೂ ಒಂದೇ, ಆದರೆ ಎಂದೂ ಮನದಲ್ಲೇ ಕೊರಗುವೇ

7. ರಾಜರತ್ನಂ ಕಸ್ತೂರಿಗೆ ಕೊಡಿಸಿದ ಬಣ್ಣದ ವಾದ್ಯ

9. ಪ್ರತಿಜ್ಞೆಯ ದಾರಿ

11. ಒಳಿತನ್ನು ಬಯಸುವವರು

12. ಜ್ಯೋತಿಷ್ಯಶಾಸ್ತ್ರದಲ್ಲಿನ ಚತುರ್ಥ ರಾಶಿ

13. ಹೊಸತರಲ್ಲಿ ತೊಡಗಿಕೊಳ್ಳುವಿಕೆ ಕೊನೆಯಲ್ಲಿ ದೀರ್ಘವಾಗಿದೆ.

ಈ ಸಂಚಿಕೆಯ ಮೆದುಳಿಗೆ ಮೇವು ಮತ್ತು ಹೆಡ್ ಬೋರರ್(ಪದಬಂಧ)ನ ಉತ್ತರಗಳನ್ನು ಮತ್ತು ಅತಿ ಬೇಗ ಉತ್ತರಗಳನ್ನು nammaankura3@gmail.com ಮಿಂಚಂಚೆಗೆ ಕಳುಹಿಸಿದ ಮೊದಲ ಮೂವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು .